## ನವಿಲುಗನ್ನಡಿ

- ನವೆಂಬರ್ ಸಂಚಿಕೆಯಲ್ಲಿ ಬಂಗಾಳಿ ಕಥೆ 'ದಾಸ್‌ಬಾಬೂ ಅವರ 24 ಗಂಟೆಗಳು' ವಾಸ್ತವಿಕ ಚಿತ್ರಣವನ್ನು ನೀಡಿತು. ಅಂತೆಯೇ ಮಹಾಮಾರ್ಗಿ ಎಂ.ಎಂ. ಕಲಬುರ್ಗಿ ಅವರ ವ್ಯಕ್ತಿತ್ವ ಕುರಿತು ಗಾಯತ್ರಿ ನಾವಡ ಅವರ ಲೇಖನ, 'ಚಿತ್ತ ಕೆತ್ತಿದ ಚಿತ್ರ'ದಲ್ಲಿ ಮುಸ್ತಾಫ ಅವರ ವಿಶ್ಲೇಷಣೆ ವಿಶೇಷ ಎನಿಸಿತು. ಒಟ್ಟಾರೆಯಾಗಿ ಸಂಚಿಕೆ ವಿಭಿನ್ನ ಲೇಖನಗಳಿಂದ ಸುಂದರವಾಗಿ ಮೂಡಿಬಂದಿದೆ.

**ರೇಷ್ಮಾ ಗುಳೇಗುಡ್ಡಾಕರ್, ಕೊಟ್ಟೂರು**

- ಈರಪ್ಪ ಎಂ. ಕಂಬಳಿ ಅವರ 'ಕನ್ನಡ ಎಂದರೆ ಸುಮ್ಮನೇ ಅಲ್ಲ' ಪ್ರಬಂಧ ಸೊಗಸಾಗಿದೆ. ನಮ್ಮ ಕನ್ನಡ ಭಾಷೆಯ ಸೊಗಡು, ಪದಲಾಲಿತ್ಯ, ನಾನಾರ್ಥಗಳ ಚಮತ್ಕಾರೀ ವರ್ಣನೆ ಭಾವಪೂರ್ಣವಾಗಿ ಬಿಂಬಿಸಿದ್ದಾರೆ. ಸುಲಲಿತ ಪ್ರಬಂಧ ಪದೇ ಪದೇ ಓದಿಸಿಕೊಂಡಿತು. ಕನ್ನಡ ಭಾಷಾ ಅಧ್ಯಯನಕಾರರಿಗೂ ಇದು ಉಪಯುಕ್ತ.

**ಸಂತೆಬೆನ್ನೂರು ಫೈಜ್ನಟ್ರಾಜ್, ತಳಕು, ಚಳ್ಳಕೆರೆ**

**ಮಂಜಪ್ಪ ಎಚ್., ಸಂತೇಬೆನ್ನೂರು**


- ಡಿ.ಎನ್. ಶ್ರೀನಾಥ್ ಅವರು ಕನ್ನಡಕ್ಕೆ ಅನುವಾದಿಸಿದ ರಮಾನಾಥ ರಾಯ್ ಅವರ ಕಥೆ 'ದಾಸ್ ಬಾಬು ಅವರ 24 ಗಂಟೆ' ತುಂಬಾ ಇಷ್ಟವಾಯಿತು. ಸಹಜವಾಗಿ ಓದಿಸಿಕೊಂಡು ಹೋಗಬಲ್ಲ ಕಥೆಯಾಗಿ ಮನುಷ್ಯನ ಜೀವನದ ಸಂಜೆಯ ಒಂದು ಮಜಲನ್ನು ಮನ ಮುಟ್ಟುವಂತೆ ಚಿತ್ರಿಸಿದ್ದಾರೆ.

**ನಿಂಗಮ್ಮ ಭಾವಿಕಟ್ಟಿ, ಹುನಗುಂದ**

- 'ಪುಟಾಣಿ ತಮ್ಮಾ...' (ಧನಂಜಯ ಕುಂಬ್ಳೆ) ಶಿಶು ಕವನ ಮೊಬೈಲ್ ಚಟ ಬಿಡಿಸಲು ಮಗುವಿಗೆ ಹೇಳಿದ ತಿಳಿವಳಿಕೆ ಮನ ಮುಟ್ಟುವಂತೆ ಇದೆ. ಪ್ರಾಸ ಶೈಲಿಯಲ್ಲಿ ಹೊಸ ಕುತೂಹಲ ಮೂಡಿಸಿದೆ. ಪದ್ಯದ ಅಂತ್ಯ ದೊಡ್ಡವರಿಗೂ ಕಿವಿಹಿಂಡಿ ಹೇಳಿದಂತೆ ಅರ್ಥಪೂರ್ಣವಾಗಿದೆ.

**ಎಸ್.ಆರ್. ನರಸಿಂಹ ಪ್ರಸಾದ್, ಕುಣಿಗಲ್**

- 'ಡೇರೆಗೆ ಬಿದ್ದ ಚಂದಿರ' ಕಥೆ, ಇಂದು ಕಲಾ ಲೋಕದಲ್ಲಿ ಏನೆಲ್ಲಾ ನಡೆಯುತ್ತದೆ ಎಂಬುದಕ್ಕೆ ಸಾಕ್ಷಿ. ಒಬ್ಬ ಕಲಾವಿದ ಸ್ವಲ್ಪ ಹೆಸರು ಮಾಡಲು ಶುರುವಿಟ್ಟುಕೊಂಡ ಅಂದರೆ, ಆತ ತನ್ನನ್ನೇ ತಾನು ಮರೆತು, ಏನು ಮಾಡಿದರೂ ಅದೇ ಸರಿ ಎಂದುಕೊಂಡು ಬಿಡುತ್ತಾನೆ. ಅದರಲ್ಲೂ ಚಟಗಳ ಗುಲಾಮನಾಗಿ, ಬದುಕನ್ನೇ ಹಾಳುಮಾಡಿಕೊಂಡು ಬಿಡುತ್ತಾನೆ. ಅಂಥವರನ್ನು ತಿದ್ದುವ ವ್ಯಕ್ತಿಗಳ ಅಗತ್ಯವಿದೆ ಎಂಬುದನ್ನು ಕಥೆ ತಿಳಿಹೇಳಿದೆ.




**ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ**

- ವಿನು ಗಂಗೆ ಅವರ 'ಚೆನ್ನದ ಗರಿ' ಕಥೆ ತುಂಬಾ ಚೆನ್ನಾಗಿ ಮೂಡಿಬಂದಿದೆ. ಶಿಕ್ಷಣದ ದಿಕ್ಕು ಬದಲಾಗುತ್ತಿರುವ ರೀತಿಯನ್ನು ತುಂಬಾ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಹಾಗೆಯೇ ರಮೇಶ್ ಆರೋಲಿ ಅವರ 'ಮಳೆರಾಯ ಮಾಡಯ್ಯ ತುಸು ನೀ ಆರಾಮ' ಕವಿತೆ ಚೆನ್ನಾಗಿ ಮೂಡಿ ಬಂದಿದೆ.

**ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟೆ, ವಿಜಯನಗರ**

- ನವೆಂಬರ್ ಸಂಚಿಕೆಯಲ್ಲಿ ಪ್ರಕಟವಾದ ಆನಂದ ಗೊಬ್ಬಿ ಅವರ 'ಬಿಸಿಲಕೋಲು' ಕಥೆ ಬಹಳ ಚೆನ್ನಾಗಿದೆ. ಸ್ಥಳೀಯ ಭಾಷೆಗೆ ಇಂಬು ನೀಡುವ ಕಥಾವಸ್ತು, ಕಥೆ ಹೇಳುವ ಶೈಲಿ ಚೆನ್ನಾಗಿ ಮೂಡಿ ಬಂದಿದೆ. ಮುಖಪುಟ ಸುಂದರವಾಗಿದೆ.

**ಎ.ಎಲ್. ಬಡಿಗೇರ, ಸುತಗುಂಡಾರ, ಬಾಗಲಕೋಟೆ**